ಶ್ರೀ ಕೆ.ಎಂ. ಶಿವಲಿಂಗೇಗೌಡ: ಯಾರೂ ಗೂಂಡಾಗಳು? ಒಬ್ಬರು ಸಚಿವರಾಗಿ ಹೇಗೆ ಮಾತನಾಡುವುದೆಂದು ಗೊತ್ತಿದೆಯೇ? ಅವರೇನು ಹೇಳುವುದು?

(ಗೊಂದಲ)

ಅಧ್ಯಕ್ಷರು: ಈ ರೀತಿಯಾದರೆ ಸದನವನ್ನು ನಡೆಸುವುದಕ್ಕೆ ನನ್ನಿಂದ ಆಗುವುದಿಲ್ಲ. ಈಗ ಸದನವನ್ನು ನಾನು ಅನಿರ್ದಿಷ್ಟ ಅವಧಿಯವರೆಗೆ ಮುಂದಕ್ಕೆ ಹಾಕುತ್ತಿದ್ದೇನೆ.

(ಸದನವನ್ನು ರಾತ್ರಿ 7 ಗಂಟೆ 55 ನಿಮಿಷಕ್ಕೆ ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು)

ಅನುಬಂಧ–1
ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಮೂರನೇ ಅಧಿವೇಶನ
(ಮುಂದುವರೆದ ಉಪವೇಶನಗಳು)

ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2009
(2009ರ ವಿಧಾನ ಸಭೆಯ ವಿಧೇಯಕ ಸಂಖ್ಯೆ – 39)

ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ನ್ನು (1957ರ ಕರ್ನಾಟಕ ಅಧಿನಿಯಮ 2) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:– (1) ಈ ಅಧಿನಿಯಮವನ್ನು **ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ಅಧಿನಿಯಮ 2009** ಎಂದು ಕರೆಯತಕ್ಕದ್ದು.

(2) ಇದು ಈ ಕೊಡಲೇ ಜಾರಿಗೆ ಬರತಕ್ಕದ್ದು.

2. 11ಬಿ ಪ್ರಕರಣದ ತಿದ್ದುಪಡಿ:– ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ರ (1957ರ ಕರ್ನಾಟಕ ಅಧಿನಿಯಮ 2) 11ಬಿ ಪ್ರಕರಣದ (1)ನೇ ಉಪಪ್ರಕರಣದ ವಿವರಣೆಯನ್ನು ಹೊರತುಪಡಿಸಿ, ಉಳಿದಭಾಗಕ್ಕೆ ಬದಲಾಗಿ ಈ ಮುಂದಿನ ಉಪ ಪ್ರಕರಣವನ್ನು ಪ್ರತಿಯೋಜಿಸತಕ್ಕದ್ದು ಹಾಗೂ 2009ರ ಜನವರಿ ದಿನಾಂಕದಿಂದ ಹಾಗೆ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು, ಎಂದರೆ:–

"(1) ಸದಸ್ಯರೊಬ್ಬರು ತಮ್ಮ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುನ್ನವೇ ಮರಣ ಹೊಂದಿದಲ್ಲಿ, ಅಥವಾ 11ಎ ಪ್ರಕರಣದಡಿಯಲ್ಲಿ ನಿವೃತ್ತಿ ವೇತನಕ್ಕೆ ಅರ್ಹರಾದ ಒಬ್ಬ ವ್ಯಕ್ತಿಯು ಮೃತರಾದಲ್ಲಿ. 11ಎ ಪ್ರಕರಣದಡಿಯಲ್ಲಿ ಪ್ರತಿ ತಿಂಗಳಿಗೆ ದೊರೆಯತಕ್ಕ ನಿವೃತ್ತಿ ವೇತನದ ಶೇಕಡಾ ಐವತ್ತರ ದರದಲ್ಲಿ ಕುಟುಂಬ ನಿವೃತ್ತಿ ವೇತನವನ್ನು ಆತನ ಕುಟುಂಬಕ್ಕೆ ಸಂದಾಯ ಮಾಡತಕ್ಕದ್ದು".

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ವಿಧಾನಮಂಡಲದ ವೇತನಗಳು, ನಿವೃತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ರ 11–ಬಿ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಸದಸ್ಯರೊಬ್ಬರು ಮರಣ ಹೊಂದಿದರೆ, 11–ಎ ಪ್ರಕರಣದಡಿಯಲ್ಲಿ ಆ ಸದಸ್ಯರಿಗೆ ದೊರೆಯುತ್ತಿದ್ದ ನಿವೃತ್ತಿ ವೇತನದ ಶೇಕಡಾ ಐವತ್ತರ ದರದಲ್ಲಿ, ಕುಟುಂಬ ನಿವೃತ್ತಿ ವೇತನವನ್ನು ಅವರ ಕುಟುಂಬಕ್ಕೆ ಜೀವಿತಾವಧಿಯವರಿಗೆ ಸಂದಾಯ ಮಾಡಲು ಉಪಬಂಧ ಕಲ್ಪಿಸಲಾಗಿದೆ.

11–ಎ ಪ್ರಕರಣದಡಿಯಲ್ಲಿ ನಿವೃತ್ತಿ ವೇತನಕ್ಕೆ ಅರ್ಹನಾದ ಒಬ್ಬ ವ್ಯಕ್ತಿಯು ಮೃತನಾದ ಸಂದರ್ಭದಲ್ಲಿ, ಅವನ ಕುಟುಂಬವು ನಿವೃತ್ತಿ ವೇತನಕ್ಕೆ ಅರ್ಹವಾಗಿರಲಿಲ್ಲ. ಅಧಿನಿಯಮದ 11–ಎ ಪ್ರಕರಣದಡಿಯಲ್ಲಿ ನಿವೃತ್ತಿ ವೇತನಕ್ಕೆ ಅರ್ಹನಾಗಿದ್ದು, ಮೃತನಾದ ವ್ಯಕ್ತಿಯ ಕುಟುಂಬಕ್ಕೆ ಕುಟುಂಬ ನಿವೃತ್ತಿ ವೇತನವನ್ನು ನೀಡಲು ಉಪಬಂಧವನ್ನು ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪಕ ಪತ್ರ

ಪ್ರಸ್ತಾವಿತ ಶಾಸನ ರಚನಾ ಕ್ರಮದಿಂದಾಗಿ ರೂ. 3670 ಲಕ್ಷಗಳ ಸಂಭವನೀಯ ಆವರ್ತಕ ವಾರ್ಷಿಕ ವೆಚ್ಚ ಉಂಟಾಗುತ್ತದೆ.

ಎಸ್. ಸುರೇಶ್ ಕುಮಾರ್
ನಗರಾಭಿವೃದ್ಧಿ, ಕಾನೂನು ಮತ್ತು
ಸಂಸದೀಯ ವ್ಯವಹಾರಗಳು ಸಚಿವರು

ಎಸ್. ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ.

ಅನುಬಂಧ
ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ರ ಉದ್ಧೃತ ಭಾಗ

XX XX XX

11ಬಿ. ಕುಟುಂಬ ನಿವೃತ್ತಿ ವೇತನ:– ಸದಸ್ಯರೊಬ್ಬರು ತಮ್ಮ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುನ್ನವೇ ಮರಣ ಹೊಂದಿದಲ್ಲಿ, ಸದಸ್ಯರಿಗೆ 11ಎ ಪ್ರಕರಣದಡಿಯಲ್ಲಿ ಪ್ರತಿ ತಿಂಗಳಿಗೆ ದೊರೆಯತಕ್ಕ ನಿವೃತ್ತಿ

ವೇತನದ ಶೇಕಡಾ ಐವತ್ತರ ದರದಲ್ಲಿ ಕುಟುಂಬ ನಿವೃತ್ತಿ ವೇತನವನ್ನು ಆತನ ಕುಟುಂಬಕ್ಕೆ ಸಂದಾಯ ಮಾಡತಕ್ಕದ್ದು.

ವಿವರಣೆ:– ಈ ಉಪ ಪ್ರಕರಣದ ಉದ್ದೇಶಗಳಿಗಾಗಿ, 'ಕುಟುಂಬ' ಎಂದರೆ, ಮೃತ ವ್ಯಕ್ತಿಯ ಈ ಮುಂದಿನ ಬಂಧುಗಳು, ಎಂದರೆ"–

(ಎ) ಪತ್ನಿ ಅಥವಾ ಪತಿ ;

(ಬಿ) ಅಪ್ರಾಪ್ತ ವಯಸ್ಸಿನ ಗಂಡು ಮಕ್ಕಳು; ಮತ್ತು

(ಸಿ) ಅವಿವಾಹಿತ ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳು.

(2) (1)ನೇ ಉಪ ಪ್ರಕರಣದಡಿಯಲ್ಲಿ ದೊರೆಯತಕ್ಕ ಕುಟುಂಬ ವೇತನವನ್ನು ಈ ಮುಂದಿನ ಕ್ರಮದಲ್ಲಿ ಸಂದಾಯ ಮಾಡತಕ್ಕದ್ದು:–

(ಎ) ಪತಿ ಅಥವಾ ಪತ್ನಿಗೆ ; ಮತ್ತು

(ಬಿ) ಮೃತ ಸದಸ್ಯನ ಪತಿ ಅಥವಾ ಪತ್ನಿ ಜೀವಂತವಾಗಿರದ ಸಂದರ್ಭದಲ್ಲಿ ಅಪ್ರಾಪ್ತ ವಯಸ್ಸಿನ ಗಂಡು ಮಕ್ಕಳಲ್ಲಿ ಹಿರಿಯ ಮಗನಿಗೆ ಅಥವಾ ಅಪ್ರಾಪ್ತ ವಯಸ್ಸಿನ ಅವಿವಾಹಿತ ಹೆಣ್ಣು ಮಕ್ಕಳಲ್ಲಿ ಹಿರಿಯ ಮಗಳಿಗೆ ;

ಪರಂತು, ಕುಟುಂಬ ವೇತನವನ್ನು ಪಡೆಯುತ್ತಿದ್ದ ವ್ಯಕ್ತಿಯು ಮೃತನಾದಲ್ಲಿ ಅಥವಾ ವಿವಾಹವಾದಲ್ಲಿ ಅಥವಾ ಪ್ರಾಪ್ತ ವಯಸ್ಕನಾದಲ್ಲಿ, ನಿವೃತ್ತಿ ವೇತನವನ್ನು ಆದ್ಯತಾ ಕ್ರಮದಲ್ಲಿ ನಂತರ ಬರುವ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದು.

XX XX XX